5

ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ರಾಜಕೀಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ವಾಣಿ ದಿನಾಂಕ : DATE: 6/6/2020

# ಖರ್ಗೆಗೆ ಹೋಳಿಗೆ

## ರಾಜ್ಯಸಭೆ ಪ್ರವೇಶಿಸಲು ಕೂಡಿಬಂದ ಯೋಗ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 06.06.2020

ರಾಜ್ಯ ಹಾಗೂ ರಾಷ್ಟ್ರ ರಾಜಕಾರಣದಲ್ಲಿ ಸುದೀರ್ಘ ಅವಧಿಗೆ ಜನಪ್ರತಿನಿಧಿಯಾಗಿ 2019ರ ಚುನಾವಣೆಯಲ್ಲಿ ಮೊದಲ ಬಾರಿ ಸೋಲುಂಡಿದ್ದ ಹಿರಿಯ ರಾಜಕಾರಣಿ, ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ



ಖರ್ಗೆಗೆ ಪುನಃ ಜನಪ್ರತಿನಿಧಿಯಾಗಿ ಆಯ್ಕೆಯಾಗುವ ಯೋಗ ಕೂಡಿಬಂದಿದೆ.

ಜೂ.19ರಂದು ನಡೆಯುವ ರಾಜ್ಯಸಭೆ ಚುನಾವಣೆಗೆ ಪಕ್ಷದ ಅಭ್ಯರ್ಥಿಯನ್ನಾಗಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಘೋಷಿಸುವ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕುತೂಹಲಕ್ಕೆ ಎಐಸಿಸಿ ತೆರೆ ಎಳೆದಿದೆ.

ಅಚ್ಚರಿ ಎಂದರೆ ಅಭ್ಯರ್ಥಿ ಯಾರಾಗಬೇಕೆಂಬ ಬಗ್ಗೆ ಕೆಪಿಸಿಸಿ ಕಚೇರಿಯಲ್ಲಿ ಗುರುವಾರ ಸಂಜೆ ನಡೆದ ಸಭೆಯಲ್ಲಿ ಅಭಿಪ್ರಾಯ ಸಂಗ್ರಹಿಸುವ ಚರ್ಚೆ ಆಗಿತ್ತು. ಆದರೆ, ಪಕ್ಷದ ಅಧ್ಯಕ್ಷೆ ಸೋನಿಯಾಗಾಂಧಿ ಸೂಚನೆಯಂತೆ ಅಭಿಪ್ರಾಯ ಸಂಗ್ರಹಕ್ಕೆ ಮುನ್ನವೇ ದೆಹಲಿಯಿಂದ ತೀರ್ಮಾನ ಹೊರಬಿದ್ದಿದೆ. ಈ ನಡುವೆ ಖರ್ಗೆಯವರಿಗೇ ಅವಕಾಶ ಕೊಡಬೇಕು ಮತ್ತು ಕೇಂದ್ರದ ವಿರುದ್ಧ ದನಿ ಎತ್ತಲು ಅವರೇ ಸರಿ ಎಂದು ರಾಜ್ಯ ಹಲವು ನಾಯಕರು ಪ್ರತಿಪಾದಿಸಿದ್ದರು.

ವಿಧಾನಸಭೆಯಲ್ಲಿ ಕಾಂಗ್ರೆಸ್ 68 ಸದಸ್ಯರನ್ನು ಹೊಂದಿದ್ದು, ಖರ್ಗೆ ಗೆಲುವಿಗೆ 46 ಮತಗಳು ಅಗತ್ಯವಾದ್ದರಿಂದ ಅವರ ಗೆಲುವು ಸಲೀಸು. ಇನ್ನು ತಮ್ಮ ಆಯ್ಕೆ ಕುರಿತು ಪ್ರತಿಕ್ರಿಯಿಸಿರುವ ಅವರು 'ಪಕ್ಷಕ್ಕಾಗಿ ನನ್ನ ಸೇವೆಯನ್ನು ಪರಿಗಣಿಸಿ ಅವಕಾಶ ಮಾಡಿಕೊಟ್ಟ ಸೋನಿಯಾಗಾಂಧಿಯವರಿಗೆ ಧನ್ಯವಾದ. [illegible] ನಾಯಕರು [illegible] ಸಹಕರಿಸಿದ್ದಾರೆ, ಅವರಿಗೆ ಕೃತಜ್ಞ' ಎಂದು ಹೇಳಿದರು.

○ ಪುಟ 6

### ಆಯ್ಕೆ ಹಿಂದಿನ ಗುಟ್ಟು

1 ಹಿರಿಯ ನಾಯಕನಿಗೆ ಅವಕಾಶ ಮಾಡಿಕೊಟ್ಟ ತೃಪ್ತಿ

2 ರಾಜ್ಯ ರಾಜಕಾರಣದಲ್ಲಿ ಅನಗತ್ಯ ಶಕ್ತಿಕೇಂದ್ರ ತಪ್ಪಿಸುವುದು

3 ಮುಂಬರುವ ಚುನಾವಣೆಯಲ್ಲಿ ಆಗಬಹುದಾದ ನಾಯಕತ್ವ ಗೊಂದಲಕ್ಕೆ ಈಗಲೇ ತೆರೆ

4 ದಲಿತ ನಾಯಕರೊಬ್ಬರಿಗೆ ಪ್ರಾತಿನಿಧ್ಯ ನೀಡಿದ ಶ್ರೇಯಸ್ಸು

5 ರಾಜಕೀಯ ಸಂಧ್ಯಾಕಾಲದಲ್ಲಿದ್ದ ಹಿರಿಯ ನಾಯಕನಿಗೆ ಫೀನಿಕ್ಸ್‌ನಂತೆ ಎದ್ದುಬರಲು ಆಸ್ಪದ

# ಮಲ್ಲಿಕಾರ್ಜುನ ಖರ್ಗೆಗೆ ಹೋಳಿಗೆ

ವಿ.ವಾ: 6/6/20

ಮೊದಲನೇ ಪುಟದಿಂದ...

ಮೊದಲನೇ ಪುಟದಿಂದ...

**ಕೈಕೊಟ್ಟಿದ್ದ ಜನತೆ:** 1972ರಿಂದ ಸತತವಾಗಿ ಜನಪ್ರತಿನಿಧಿಯಾಗಿ ಆಯ್ಕೆಯಾಗಿದ್ದ ಖರ್ಗೆ 2019ರ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಉಮೇಶ್ ಜಾಧವ್ ಎದುರು 95 ಸಾವಿರ ಮತಗಳ ಅಂತರದಿಂದ ಸೋಲುಂಡಿದ್ದರು.

**ರಾಜ್ಯಸಭೆ ಪ್ರತಿಪಕ್ಷ ನಾಯಕ?:** ರಾಜ್ಯಸಭೆಯಲ್ಲಿ ಹಾಲಿ ಪ್ರತಿಪಕ್ಷ ನಾಯಕರಾಗಿರುವ ಗುಲಾಂ ನಬಿ ಆಜಾದ್ ಅವಧಿ ಜೂ.8ಕ್ಕೆ ಮುಕ್ತಾಯವಾಗುತ್ತಿದೆ. ಈ ಸ್ಥಾನ ಮಲ್ಲಿಕಾರ್ಜುನ ಖರ್ಗೆಗೆ ಒಲಿದುಬರುವ ಸಾಧ್ಯತೆ ಇದೆ ಎಂಬ ಮಾತುಗಳು ರಾಜ್ಯ ಕಾಂಗ್ರೆಸ್‌ನಲ್ಲಿದೆ. ರಾಜ್ಯಸಭೆಯಲ್ಲಿ ಕಾಂಗ್ರೆಸ್ ಸಮರ್ಥ ನಾಯಕನ ಕೊರತೆ ಎದುರಿಸುತ್ತಿದೆ. ಪಿ. ಚಿದಂಬರಂ ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ಕೇಸ್‌ಗಳಿಂದ ಜರ್ಜರಿತರಾಗಿದ್ದಾರೆ. ಆನಂದ್ ಶರ್ಮಾ ಗಮನಾರ್ಹವಾಗಿ ಕಾಣಿಸಿಲ್ಲ. ಹೀಗಾಗಿ ಖರ್ಗೆ ಅವರಿಗೆ ಅವಕಾಶ ಸಿಗಬಹುದೆಂಬ ಚರ್ಚೆಗಳು ನಡೆದಿವೆ.



## ರಾಜಕೀಯ ವೃತ್ತಾಂತ

2004ರಲ್ಲಿ 8ನೇ ಬಾರಿಗೆ ಶಾಸಕರಾಗಿ ಆಯ್ಕೆ ಆದರೂ ಮುಖ್ಯಮಂತ್ರಿ ಆಗುವುದರಿಂದ ವಂಚಿತ. 2008ರಲ್ಲಿ ದಾಖಲೆಯ 9ನೇ ಬಾರಿಗೆ ವಿಧಾನಸಭೆ ಪ್ರವೇಶಿಸಿ ಪ್ರತಿಪಕ್ಷ ನಾಯಕರಾದರು. 2009ರಲ್ಲಿ ಕಲಬುರಗಿ ಲೋಕಸಭಾ ಕ್ಷೇತ್ರದಿಂದ ಆಯ್ಕೆ, 2014ರಲ್ಲಿ ಅದೇ ಕ್ಷೇತ್ರದಿಂದ ಪುನರಾಯ್ಕೆ, 2019ರಲ್ಲಿ ಮಾತ್ರ ಸೋಲಿನ ಕಹಿ ಉಂಡಿದ್ದರು.

ಲೋಕಸಭೆಯಲ್ಲಿ ನನ್ನ ಸೇವೆಯನ್ನು ಗುರುತಿಸಿ ರಾಜ್ಯಸಭೆಗೆ ಅಭ್ಯರ್ಥಿಯಾಗಿ ಆಯ್ಕೆ ಮಾಡಿದ್ದಾರೆ. ನನ್ನ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳುತ್ತೇನೆ. 47 ವರ್ಷಗಳಿಂದ ಚುನಾವಣೆಯಲ್ಲಿ ಗೆದ್ದುಕೊಂಡು ಬರುತ್ತಿದ್ದೆ. ಆದರೆ ಬಿಜೆಪಿ ನಾಯಕರು ವಿಶೇಷ ಆಸಕ್ತಿವಹಿಸಿ ಸೋಲಿಸಿದ್ದರು. ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಸಹ ನನ್ನ ಆಯ್ಕೆಗೆ ಕಾರಣರಾಗಿದ್ದಾರೆ.

**| ಮಲ್ಲಿಕಾರ್ಜುನ ಖರ್ಗೆ** ರಾಜ್ಯಸಭೆ ಕಾಂಗ್ರೆಸ್ ಅಭ್ಯರ್ಥಿ

## ಆಯ್ಕೆ ಸೈಡ್ ಎಫೆಕ್ಟ್

ಇದೇ ವೇಳೆ ರಾಜ್ಯಸಭೆ ಪ್ರವೇಶದ ಮೇಲೆ ಕಣ್ಣಿಟ್ಟಿದ್ದವರಿಗೆ ನಿರಾಸೆಯಾಗಿದೆ. ಲೋಕಸಭೆ ಚುನಾವಣೆ ಸಂದರ್ಭದಲ್ಲಿ ಮೈತ್ರಿ ಕಾರಣಕ್ಕೆ ದೇವೇಗೌಡರಿಗಾಗಿ ಕ್ಷೇತ್ರ ಬಿಟ್ಟುಕೊಟ್ಟಿದ್ದ ಮುದ್ದಹನುಮೇಗೌಡ, ರಾಜ್ಯಸಭಾ ಅವಧಿ ಮುಗಿಸಿದ ರಾಜೀವ್ ಗೌಡ, ಬಿ.ಕೆ.ಹರಿಪ್ರಸಾದ್ ರಾಜ್ಯಸಭೆ ಆಯ್ಕೆ ಬಯಸಿದ್ದ ಪ್ರಮುಖರಿಗೆ ಖರ್ಗೆ ಹೆಸರು ಖಾತ್ರಿಯಾಗುತ್ತಿದ್ದಂತೆ ನಿರಾಸೆಯಾಗಿದೆ.

ಖರ್ಗೆ ಆಯ್ಕೆ ಮಾಡಿರುವುದು ರಾಷ್ಟ್ರೀಯ ನಾಯಕರು, ರಾಷ್ಟ್ರಮಟ್ಟದಲ್ಲಿ ತೆಗೆದುಕೊಂಡಿರುವ ತೀರ್ಮಾನ. ಇವತ್ತಿನವರೆಗೂ ಈ ಬಗ್ಗೆ ನನ್ನ ಬಳಿ ಯಾರೂ ಚರ್ಚೆ ಮಾಡಿಲ್ಲ.

**| ಡಿ.ಕೆ.ಶಿವಕುಮಾರ್** ಕೆಪಿಸಿಸಿ ಅಧ್ಯಕ್ಷ

ಬಿಜೆಪಿ ಸರ್ಕಾರದ ನಾಯಕತ್ವ ಬದಲಾವಣೆ ಬಗ್ಗೆ ನಾನ್ಯಾಕೆ ತಲೆಕೆಡಿಸಿಕೊಳ್ಳಲಿ? ಬಿಜೆಪಿ ಸರ್ಕಾರ ಉರುಳಿಸಬೇಕೆಂಬ ಯಾವ ಆಸಕ್ತಿಯನ್ನೂ ಇಟ್ಟುಕೊಂಡಿಲ್ಲ. ಸರ್ಕಾರದ ಲೋಪ ಬದಲಾಯಿಸಿಕೊಳ್ಳಿ ಅಂತ ಸಲಹೆ ನೀಡಿದ್ದೇನಷ್ಟೇ. ನನಗೆ ಆ ಸರ್ಕಾರದ ಬಗ್ಗೆ ಆಸಕ್ತಿ ಇಲ್ಲದಿರುವಾಗ ಆ ಬಗ್ಗೆ ಯಾಕೆ ಯೋಚಿಸಲಿ?

**| ಎಚ್.ಡಿ.ಕುಮಾರಸ್ವಾಮಿ** ಮಾಜಿ ಮುಖ್ಯಮಂತ್ರಿ



ಸಿದ್ದರಾಮಯ್ಯ ಸ್ವಾರ್ಥ ರಾಜಕಾರಣ, ಕಾಂಗ್ರೆಸ್ ಮೋಸ ಮಾಡಿದ್ದರಿಂದಲೇ ನಾವು ಪಕ್ಷ ಬಿಟ್ಟಿದ್ದು. ನಾವು ಮತ್ತು ಆರ್.ಶಂಕರ್, ಎಂಟಿಬಿ ನಾಗರಾಜ್, ಎಚ್.ವಿಶ್ವನಾಥ್ ತ್ಯಾಗ ಮಾಡಿದ್ದರಿಂದ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಸಿಎಂ ಬಿಎಸ್‌ವೈ ಕೊಟ್ಟ ಮಾತಿನಂತೆ ನಡೆದುಕೊಳ್ಳುತ್ತಾರೆ.

**| ಬಿ.ಸಿ.ಪಾಟೀಲ್** ಕೃಷಿ ಸಚಿವ